ಕರ್ನಾಟಕ ಸರ್ಕಾರ

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ

6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003

## 2025-26 ನೇ ಸಾಲಿನ ದ್ವಿತೀಯ ಪಿಯುಸಿ ಮಾದರಿ ಪ್ರಶ್ನೆಪತ್ರಿಕೆ – 1

**ವಿಷಯ : ಲೆಕ್ಕಶಾಸ್ತ್ರ (30)** **ಗರಿಷ್ಠ ಅಂಕಗಳು : 80**

**ಸಮಯ : 03 ಗಂಟೆಗಳು** **ಒಟ್ಟು ಪ್ರಶ್ನೆಗಳ ಸಂಖ್ಯೆ : 32**

**ಸೂಚನೆಗಳು :**

1] ಪ್ರಶ್ನೆ ಪತ್ರಿಕೆಯು ಎ,ಬಿ,ಸಿ. ಮತ್ತು ಡಿ ಭಾಗಗಳನ್ನು ಹೊಂದಿದೆ. **ಭಾಗ-ಎ** ಯು I, II, III ಮತ್ತು IV ವಿಭಾಗಗಳನ್ನು ಒಳಗೊಂಡಿದೆ.

2] ಅಗತ್ಯವಿರುವ ಕಡೆ ಲೆಕ್ಕದ ಟಿಪ್ಪಣಿಗಳನ್ನು ಬರೆಯಿರಿ.

3] ಅಭ್ಯರ್ಥಿಗಳಿಗೆ ಪ್ರಶ್ನೆ ಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷದ ಅವಧಿಯನ್ನು ಹೆಚ್ಚುವರಿಯಾಗಿ ನೀಡಿದೆ.

4] ಹಾಳೆಯ ಬಲಬದಿಯಲ್ಲಿ ಬರೆದಿರುವ ಸಂಖ್ಯೆಗಳು ಪೂರ್ಣ ಅಂಕಗಳನ್ನು ತೋರಿಸುತ್ತವೆ.

5] **ಭಾಗ-ಎ** ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

### ಭಾಗ – ಎ

**I ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.** **(5 x 1 = 5)**

1] P ಮತ್ತು Q ಎಂಬ ಪಾಲುದಾರರು 3:1ರ ಅನುಪಾತದಲ್ಲಿ ಲಾಭ ಹಂಚಿಕೊಳ್ಳುವರು 'R' ಎಂಬುವವರು 1/5ರ ಪಾಲಿಗೆ ಸಂಸ್ಥೆಗೆ ಸೇರಿದರು. P ಮತ್ತು Q ಇವರ ತ್ಯಾಗದ ಅನುಪಾತವು

a] 2 : 1 b] 3 : 1 c] 1 : 1 d] 3 : 2

2] ಸಂಸ್ಥೆಯು ವಿಸರ್ಜನೆಯಾದಾಗ, ಪಾಲುದಾರರ ಬಂಡವಾಳ ಖಾತೆಗಳನ್ನು ಈ ಖಾತೆಯ ಮೂಲಕ ಮುಕ್ತಾಯಗೊಳಿಸಲಾಗುವುದು

a] ವಿಲೇವಾರಿ ಖಾತೆ b] ಸ್ವಂತ ವೆಚ್ಚದ ಖಾತೆ

c] ನಗದು ಅಥವಾ ಬ್ಯಾಂಕು ಖಾತೆ d] ಸಾಲದ ಖಾತೆ

3] ಮುಟ್ಟುಗೋಲಾದ ಶೇರುಗಳ ಮರು ನೀಡಿಕೆಯ ಮೇಲಿನ ಲಾಭವನ್ನು ವರ್ಗಾಯಿಸುವ ಖಾತೆ

a] ಸಾಮಾನ್ಯ ಮೀಸಲು ಖಾತೆ b] ಬಂಡವಾಳ ವಿಮೋಚನಾ ಮೀಸಲು ಖಾತೆ

c] ಬಂಡವಾಳ ಮೀಸಲು ಖಾತೆ d] ಕಂದಾಯ ಮೀಸಲು ಖಾತೆ

4] ಈ ಕೆಳಗಿನವುಗಳಲ್ಲಿ ಯಾವುದನ್ನು "ಸ್ಥಿರಾಸ್ತಿಗಳು" ತಲೆಬರಹದಲ್ಲಿ ತೋರಿಸಲಾಗುವುದು?

a] ದಾಸ್ತಾನು b] ವ್ಯಾಪಾರೀ ಬರತಕ್ಕವುಗಳು

c] ನಗದು ಮತ್ತು ನಗದು ಸಮಾನಕಗಳು d] ಕೀರ್ತಿಮೌಲ್ಯ


Visit CollegeDekho

5] ಕೆಳಗಿನ ಅನುಪಾತಗಳ ಗುಂಪುಗಳು ಮುಖ್ಯವಾಗಿ ಗಂಡಾಂತರವನ್ನು ಅಳೆಯುತ್ತವೆ.

a] ದ್ರವತ್ವ, ಸಾಲ ಮತ್ತು ಲಾಭದಾಯಕತೆ
b] ದ್ರವತ್ವ, ಚಟುವಟಿಕೆ ಮತ್ತು ದಾಸ್ತಾನು
c] ದ್ರವತ್ವ, ಚಟುವಟಿಕೆ ಮತ್ತು ಸಾಲ
d] ದ್ರವತ್ವ, ಚಟುವಟಿಕೆ ಮತ್ತು ಲಾಭದಾಯಕತೆ

**II. ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಖಾಲಿ ಬಿಟ್ಟ ಸ್ಥಳವನ್ನು ಭರ್ತಿಮಾಡಿ.** **(5 x 1 = 5)**

**[ಹೊಸಲಾಭ ಹಂಚಿಕೆ, ಅಲ್ಪಾವಧಿ, ಮುದ್ರಾಂಕ, ಕೃತಕ, ವಿಲೇವಾರಿ, ದೀರ್ಘಾವಧಿ]**

6] __________ ಕಾಯ್ದೆ ಪ್ರಕಾರ ಪಾಲುದಾರಿಕೆಯ ಕರಾರು ಪತ್ರವನ್ನು ತಯಾರಿಸಬೇಕು.

7] ಮುಂದುವರೆಯುವ ಪಾಲುದಾರರ ಬಂಡವಾಳ ಹೊಂದಾಣಿಕೆಗೆ _________ ಅನುಪಾತವನ್ನು ಬಳಸಲಾಗುತ್ತದೆ.

8] ಪಾಲುದಾರಿಕಾ ಸಂಸ್ಥೆಯ ವಿಸರ್ಜನೆಯ ಸಂದರ್ಭದಲ್ಲಿ ವಿಸರ್ಜನಾ ವೆಚ್ಚವನ್ನು ಸಂಸ್ಥೆಯು ಭರಿಸಿದಾಗ, ಅಂತಹ ವೆಚ್ಚವನ್ನು _______ ಖಾತೆಗೆ ಖರ್ಚು ಹಾಕಲಾಗುತ್ತದೆ.

9] ಕಂಪನಿಯು ಒಂದು ___________ ವ್ಯಕ್ತಿಯಾಗಿದೆ.

10] ವ್ಯವಹಾರದ ____________ ಸದೃಡತೆಯನ್ನು ಅಳೆಯಲು ದ್ರವತ್ವದ ಅನುಪಾತಗಳನ್ನು ಲೆಕ್ಕಹಾಕುತ್ತಾರೆ.

**III. ಹೊಂದಿಸಿ ಬರೆಯಿರಿ.** **(5 x 1 = 5)**

**11]**

| A | B |
|---|---|
| (a) ಕೀರ್ತಿಮೌಲ್ಯದ ಮೌಲ್ಯಮಾಪನ | (i) ಸಾಲ ಸ್ವೀಕೃತಿ ಪತ್ರ |
| (b) ವಾರಸುದಾರರ ಖಾತೆ | (ii) ಹಣ ಒದಗಿಸುವ ಚಟುವಟಿಕೆಗಳು |
| (c) ಸಾಲ ಪತ್ರ | (iii) ತುಲನಾತ್ಮಕ ತಃಖ್ತೆ |
| (d) ಸಮತಲ ವಿಶ್ಲೇಷಣೆ | (iv) ಪಾಲುದಾರನ ನಿಧನ |
| (e) ಶೇರುಗಳ ನೀಡಿಕೆ | (v) ಸಾಮಾನ್ಯ ಗಾತ್ರದ ತಃಖ್ತೆ |
| | (vi) ಸರಾಸರಿ ಲಾಭದ ವಿಧಾನ |

**IV. ಕೆಳಗಿನ ಪ್ರಶ್ನೆಗಳಿಗೆ ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ.** **(5 x 1 = 5)**

12] ಪಾಲುದಾರಿಕೆಯ ಯಾವುದಾದರೂ ಒಂದು ಲಕ್ಷಣವನ್ನು ತಿಳಿಸಿ.

13] DRFIನ್ನು ವಿಸ್ತರಿಸಿ.

14] ಚಾಲ್ತಿಯೇತರ ಆಸ್ತಿಗಳಿಗೆ ಒಂದು ಉದಾಹರಣೆ ಕೊಡಿ.

15] ಹಣಕಾಸಿನ ತಃಖ್ತೆಗಳ ವಿಶ್ಲೇಷಣೆಯನ್ನು ಉಪಯೋಗಿಸುವ ಯಾವುದಾದರೂ ಒಬ್ಬ ಬಳಕೆದಾರರನ್ನು ತಿಳಿಸಿ.

16] ಲಾಭಾಂಶ ಪಾವತಿಯು ಒಂದು ಹೂಡಿಕೆಯ ಚಟುವಟಿಕೆಯಾಗಿದೆ. (ಸರಿ / ತಪ್ಪು ತಿಳಿಸಿ).


Visit CollegeDekho

## ಭಾಗ – ಬಿ

**V. ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ, ಪ್ರತಿ ಪ್ರಶ್ನೆಗೆ ಎರಡು ಅಂಕಗಳು. (3 x 2 = 6)**

17] ಸ್ಥಿರ ಬಂಡವಾಳ ಮತ್ತು ಬದಲಾಗುವ ಬಂಡವಾಳ ವಿಧಾನಗಳ ನಡುವಿನ ಯಾವುದಾದರೂ ಎರಡು ವ್ಯತ್ಯಾಸಗಳನ್ನು ತಿಳಿಸಿ.

18] ಪಾಲುದಾರನ ನಿವೃತ್ತಿ ಸಂದರ್ಭದಲ್ಲಿ ಪುನರ್ ಮೌಲ್ಯ ಮಾಪನ ಖಾತೆಯನ್ನು ಮುಕ್ತಾಯಗೊಳಿಸುವಾಗ ನಷ್ಟವಿದ್ದರೆ, ಬರೆಯುವ ರೋಜು ದಾಖಲೆಯನ್ನು ನೀಡಿರಿ.

19] ಶೇರು ಬಂಡವಾಳದ ಯಾವುದಾದರೂ ಎರಡು ವರ್ಗಗಳನ್ನು ಹೆಸರಿಸಿ.

20] ಹಣಕಾಸಿನ ತಃಖ್ತೆಗಳ ಯಾವುದಾದರೂ ಎರಡು ಉದ್ದೇಶಗಳನ್ನು ಬರೆಯಿರಿ.

21] ನಗದು ಹರಿವು ತಃಖ್ತೆ ಎಂದರೇನು?

## ಭಾಗ – ಸಿ

**VI. ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ಆರು ಅಂಕಗಳು. (3 x 6 = 18)**

22] ಭಾವನ ಮತ್ತು ಕವನರವರು ಒಂದು ಸಂಸ್ಥೆಯ ಪಾಲುದಾರರಾಗಿದ್ದು, ಸಂಸ್ಥೆಯ ಲಾಭ ಮತ್ತು ನಷ್ಟಗಳನ್ನು 2:1 ರ ಅನುಪಾತದಲ್ಲಿ ಹಂಚಿಕೊಳ್ಳಲು ಒಪ್ಪಿರುತ್ತಾರೆ. 2024-25ನೇ ವರ್ಷದಲ್ಲಿ ಕವನ ತನ್ನ ಸ್ವಂತಕ್ಕೆ ಈ ಕೆಳಗಿನಂತೆ ಹಣವನ್ನು ಬಳಸಿರುತ್ತಾಳೆ.

a] ದಿನಾಂಕ : 01.06.2024 ರಂದು ₹ 2,000

b] ದಿನಾಂಕ : 30.09.2024 ರಂದು ₹ 3,000

c] ದಿನಾಂಕ : 30.11.2024 ರಂದು ₹ 1,000

d] ದಿನಾಂಕ : 01.01.2025 ರಂದು ₹ 1,500

ಗುಣಲಬ್ಧ ಪದ್ಧತಿಯ ಪ್ರಕಾರ ವಾರ್ಷಿಕ ಶೇಕಡಾ 10 ರಂತೆ ದಿನಾಂಕ : 31.03.2025ಕ್ಕೆ ಅಂತ್ಯವಾಗುವ ವರ್ಷಕ್ಕೆ ಕವನಾಳ ಸ್ವಂತ ವೆಚ್ಚದ ಮೇಲಿನ ಬಡ್ಡಿಯನ್ನು ಕಂಡುಹಿಡಿಯಿರಿ.

23] ಗೀತಾ, ಲತಾ ಮತ್ತು ಸಂಗೀತಾ ಪಾಲುದಾರರಾಗಿದ್ದು, ಲಾಭ ಮತ್ತು ನಷ್ಟವನ್ನು ಅನುಕ್ರಮವಾಗಿ 5:3:2ರ ಅನುಪಾತದಲ್ಲಿ ಹಂಚಿಕೊಳ್ಳುತ್ತಾರೆ. ಲತಾ ಸಂಸ್ಥೆಯಿಂದ ನಿವೃತ್ತಿ ಹೊಂದುತ್ತಾಳೆ. ಗೀತಾ ಮತ್ತು ಸಂಗೀತಾ ಭವಿಷ್ಯದ ಲಾಭವನ್ನು 3:2 ರ ಅನುಪಾತದಲ್ಲಿ ಹಂಚಿಕೊಳ್ಳಲು ನಿರ್ಧರಿಸುತ್ತಾರೆ. ಗೀತಾ ಮತ್ತು ಸಂಗೀತಾರವರ ಗಳಿಕೆಯ ಅನುಪಾತವನ್ನು ಕಂಡುಹಿಡಿಯಿರಿ.

24] X, Y ಮತ್ತು Z ಪಾಲುದಾರರಾಗಿದ್ದು, ಸಂಸ್ಥೆಯ ಲಾಭ-ನಷ್ಟವನ್ನು 2:2:1ರ ಅನುಪಾತದಲ್ಲಿ ಹಂಚಿಕೊಳ್ಳುತ್ತಾರೆ. ದಿನಾಂಕ 01.04.2024 ರಂದು ಅವರ ಬಂಡವಾಳ ಖಾತೆಯ ಶಿಲ್ಕು ಅನುಕ್ರಮವಾಗಿ ₹ 1,00,000, ₹ 1,00,000 ಮತ್ತು ₹ 50,000 ಆಗಿರುತ್ತದೆ. ದಿನಾಂಕ : 31.12.2024 ರಂದು Y ನಿಧನ ಹೊಂದಿದ್ದು, ಪಾಲುದಾರಿಕೆಯ ಒಪ್ಪಂದವು ಈ ಕೆಳಗಿನ ಅಂಶಗಳನ್ನು ಒಳಗೊಂಡಿದೆ.

a] ಬಂಡವಾಳದ ಮೇಲಿನ ಬಡ್ಡಿ ವಾರ್ಷಿಕ ಶೇಕಡ 10.

b] Y ನ ಮಾಸಿಕ ಸಂಬಳ ₹ 3,000

c] Y ನ ಪಾಲಿನ ಕೀರ್ತಿಮೌಲ್ಯ. ಸಂಸ್ಥೆಯ ಒಟ್ಟು ಕೀರ್ತಿಮೌಲ್ಯ ₹ 45,000 (AS-26ರ ಪ್ರಕಾರ)


Visit CollegeDekho

d] ಹಿಂದಿನ ವರ್ಷದ ಲಾಭದ ಆಧಾರದ ಮೇಲೆ ನಿಧನ ಹೊಂದಿದ ದಿನಾಂಕದವರೆಗಿನ Y ನ ಲಾಭದ ಪಾಲು, ಹಿಂದಿನ ವರ್ಷದ ಲಾಭ ₹ 60,000.

**Y ನ ಬಂಡವಾಳ ಖಾತೆಯನ್ನು ತಯಾರಿಸಿ.**

25] ಈ ಕೆಳಗಿನ ವಿವರಗಳಿಂದ ಕಂಪನಿ ಕಾಯಿದೆ 2013ರ ಪರಿಚ್ಛೇದ - III ರ ಪ್ರಕಾರ, ದಿನಾಂಕ : 31.03.2025 ರಂದು ಕೊನೆಗೊಂಡ ವರ್ಷದ ಲಾಭ ಮತ್ತು ನಷ್ಟ ತಃಖ್ತೆಯನ್ನು ತಯಾರಿಸಿ.

| ವಿವರಗಳು | ₹ |
|---|---|
| ಕಾರ್ಯಾಚರಣೆಯಿಂದ ಬಂದ ಆದಾಯ | **8,00,000** |
| ಸರಕುಗಳ ಖರೀದಿ | **2,00,000** |
| ಸಿಬ್ಬಂದಿಗಳ ಸಂಬಳ | **1,00,000** |
| ಬೋನಸ್ | **20,000** |
| ಸವಕಳಿ | **50,000** |
| ಸಾಲಪತ್ರಗಳ ಮೇಲಿನ ಬಡ್ಡಿ | **25,000** |
| ಸಾಲಗಳ ಮೇಲಿನ ಬಡ್ಡಿ | **20,000** |
| ತೆರಿಗೆ | **1,15,500** |

26] ಈ ಕೆಳಗಿನ ಮಾಹಿತಿಗಳಿಂದ ಹಣಕಾಸು ಒದಗಿಸುವ ಚಟುವಟಿಕೆಗಳಿಂದಾಗುವ ನಗದು ಹರಿವುಗಳನ್ನು ಲೆಕ್ಕಾಚಾರ ಮಾಡಿರಿ.

| ವಿವರಗಳು | 01.04.2024 ₹ | 31.03.2025 ₹ |
|---|---|---|
| ಈಕ್ವಿಟಿ ಶೇರು ಬಂಡವಾಳ | **10,00,000** | **15,00,000** |
| ಧೀರ್ಘಾವಧಿ ಸಾಲ | **4,50,000** | **8,00,000** |

ವರ್ಷಾವಧಿಯಲ್ಲಿ ಕಂಪನಿಯು ₹ 10,000 ಬಡ್ಡಿಯೊಂದಿಗೆ, ₹ 2,00,000 ಗಳ ದೀರ್ಘಾವಧಿ ಸಾಲ ಮರುಪಾವತಿ ಹಾಗೂ ₹ 25,000 ಲಾಭಾಂಶ ಪಾವತಿಸಿದೆ.

## ಭಾಗ – ಡಿ

**VII. ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ಹನ್ನೆರಡು ಅಂಕಗಳು.** **(3 x 12 = 36)**

27] ಗಿರೀಶ ಮತ್ತು ಯೋಗೀಶ ಪಾಲುದಾರರಾಗಿದ್ದು ಲಾಭ ಮತ್ತು ನಷ್ಟವನ್ನು ಅನುಕ್ರಮವಾಗಿ 3:2 ರ ಅನುಪಾತದಲ್ಲಿ ಹಂಚಿಕೊಳ್ಳುವರು. ದಿನಾಂಕ : 31.03.2025 ರಂದು ಅವರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ.

**ದಿನಾಂಕ : 31.03.2025ರ ಅಢಾವೆ ಪತ್ರಿಕೆ.**

| ಹೊಣೆಗಾರಿಕೆಗಳು | ₹ | ಆಸ್ತಿಗಳು | | ₹ |
|---|---|---|---|---|
| ಸಾಹುಕಾರರು | **74,000** | ನಗದು | | **31,000** |
| ಕೊಡತಕ್ಕ ಹುಂಡಿಗಳು | **41,000** | ಸಾಲಗಾರರು | 1,00,000 | |
| ಸಾಮಾನ್ಯ ಮೀಸಲು | **50,000** | ಕಳೆ:(-) PDD | 6,000 | **94,000** |


Visit CollegeDekho

| | | | |
|---|---|---|---|
| ಬಂಡವಾಳ ಖಾತೆ : | | ದಾಸ್ತಾನು | 30,000 |
| ಗಿರೀಶ | 1,40,000 | ಪೀಠೋಪಕರಣ | 20,000 |
| ಯೋಗೀಶ | 80,000 | ಯಂತ್ರೋಪಕರಣ | 40,000 |
| | | ಕಟ್ಟಡಗಳು | 1,60,000 |
| | | ಲಾಭ ಮತ್ತು ನಷ್ಟ ಖಾತೆ | 10,000 |
| | **3,85,000** | | **3,85,000** |

ದಿನಾಂಕ : 01.04.2025 ರಂದು ಕಲ್ಲೇಶನಿಗೆ ಈ ಕೆಳಗಿನ ಕರಾರುಗಳ ಮೇಲೆ ಪಾಲುದಾರಿಕೆಗೆ ಪ್ರವೇಶ ನೀಡಲಾಯಿತು:

a] 1/6ರ ಭಾಗದ ಲಾಭಕ್ಕಾಗಿ ಕಲ್ಲೇಶನು ₹ 60,000 ಬಂಡವಾಳ ಮತ್ತು ಕೀರ್ತಿಮೌಲ್ಯಕ್ಕಾಗಿ ನಗದು ₹ 25,000 ತರಬೇಕು (AS 26 ರ ಪ್ರಕಾರ)

b] ಕೀರ್ತಿಮೌಲ್ಯದ ಮೊತ್ತವನ್ನು ಹಳೆಯ ಪಾಲುದಾರರು ಹಿಂದಕ್ಕೆ ಪಡೆಯುತ್ತಾರೆ.

c] ಪೀಠೋಪಕರಣಗಳ ಮತ್ತು ಯಂತ್ರೋಪಕರಣ ಮೇಲೆ ಶೇ. 10 ರಷ್ಟು ಸವಕಳಿ ತೆಗೆಯಿರಿ.

d] ಕಟ್ಟಡಗಳ ಮೌಲ್ಯವನ್ನು ಶೇಕಡ 15ರಷ್ಟು ಹೆಚ್ಚಿಸಿ.

e] ಸಾಲಗಾರರ ಮೇಲಿನ ಸಂಶಯಾತ್ಮಕ ಸಾಲಗಳ ಕಾಯ್ದಿರಿಸುವಿಕೆ (PDD)ಶೇ. 10 ರಷ್ಟು ಇರಲಿ.

**ತಯಾರಿಸಿ :** (i) ಪುನರ್ ಮೌಲ್ಯ ಖಾತೆ

(ii) ಪಾಲುದಾರರ ಬಂಡವಾಳ ಖಾತೆ ಮತ್ತು

(iii) ದಿನಾಂಕ : 01.04.2025 ರಂದು ಸಂಸ್ಥೆಯ ಹೊಸ ಅಢಾವೆ ಪತ್ರಿಕೆ.

28] ಶಂಕರ ಮತ್ತು ಸದಾನಂದ ಪಾಲುದಾರರಾಗಿದ್ದು, ಲಾಭ ಮತ್ತು ನಷ್ಟಗಳನ್ನು 3:2 ರ ಅನುಪಾತದಲ್ಲಿ ಹಂಚಿಕೊಳ್ಳುತ್ತಾರೆ. ದಿನಾಂಕ : 31.03.2025 ರಂದು ಅವರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ:

**ದಿನಾಂಕ : 31.03.2025 ರಂದು ಅಢಾವೆ ಪತ್ರಿಕೆ.**

| ಹೊಣೆಗಾರಿಕೆಗಳು | ₹ | ಆಸ್ತಿಗಳು | ₹ |
|---|---|---|---|
| ಸಾಹುಕಾರರು | 35,000 | ಬ್ಯಾಂಕಿನಲ್ಲಿ ನಗದು | 30,000 |
| ಕೊಡತಕ್ಕ ಹುಂಡಿಗಳು | 15,000 | ಬರತಕ್ಕ ಹುಂಡಿಗಳು | 10,000 |
| ಬ್ಯಾಂಕ್ ಸಾಲ | 25,000 | ಸಾಲಗಾರರು | 60,000 |
| ಶಂಕರನ ಸಾಲ | 10,000 | ಹೂಡಿಕೆಗಳು | 40,000 |
| ಮೀಸಲು ನಿಧಿ | 30,000 | ಪೀಠೋಪಕರಣ | 5,000 |
| **ಬಂಡವಾಳಗಳು :** | | ಯಂತ್ರೋಪಕರಣ | 70,000 |
| ಶಂಕರ | 1,00,000 | ಕಟ್ಟಡ | 80,000 |
| ಸದಾನಂದ | 80,000 | | |
| | **2,95,000** | | **2,95,000** |

ಮೇಲಿನ ದಿನಾಂಕದಂದು ಸಂಸ್ಥೆಯನ್ನು ವಿಸರ್ಜಿಸಲಾಯಿತು.


Visit CollegeDekho

**ಹೆಚ್ಚಿನ ಮಾಹಿತಿ :**

a] ಆಸ್ತಿಗಳನ್ನು ಈ ಕೆಳಕಂಡಂತೆ ವಿಲೇವಾರಿ ಮಾಡಲಾಯಿತು:

ಬರತಕ್ಕ ಹುಂಡಿಗಳು ₹ 8,000

ಸಾಲಗಾರರು ₹ 55,000

ಹೂಡಿಕೆಗಳು ₹ 50,000

ಪೀಠೋಪಕರಣ ₹ 4,000

ಯಂತ್ರೋಪಕರಣ ₹ 65.000

b] ಶಂಕರರವರು ಕಟ್ಟಡವನ್ನು ₹ 90,000ಕ್ಕೆ ತೆಗೆದುಕೊಂಡನು.

c] ಸಾಹುಕಾರರು ಮತ್ತು ಕೊಡತಕ್ಕ ಹುಂಡಿಗಳನ್ನು ಶೇಕಡ 10 ಸೋಡಿಗೆ ಚುಕ್ತಾ ಮಾಡಲಾಯಿತು.

d] ವಿಲೇವಾರಿ ವೆಚ್ಚಗಳು ₹ 3,000.

**ತಯಾರಿಸಿ :** (i) ವಿಲೇವಾರಿ ಖಾತೆ

(ii) ಪಾಲುದಾರರ ಬಂಡವಾಳ ಖಾತೆ ಮತ್ತು

(iii) ಬ್ಯಾಂಕ್ ಖಾತೆ.

29] ರಾಮಕೃಷ್ಣ ಕಂಪನಿ ನಿಯಮಿತ ಇವರು ₹ 100ರ ಮುಖಬೆಲೆಯ, 20,000 ಈಕ್ವಿಟಿ ಶೇರುಗಳನ್ನು ಪ್ರತಿ ಶೇರಿಗೆ ಪ್ರೀಮಿಯಂ ₹ 10 ರಂತೆ ಬಿಡುಗಡೆ ಮಾಡಿದರು. ಹಣ ಪಾವತಿಯು ಈ ಕೆಳಗಿನಂತಿದೆ:

₹ 20 ಅರ್ಜಿ ಹಣ

₹ 55 ಹಂಚಿಕೆ ಹಣ (ಪ್ರೀಮಿಯಂ ಸೇರಿ)

₹ 35 ಪ್ರಥಮ ಮತ್ತು ಅಂತಿಮ ಕರೆ ಹಣ

ಎಲ್ಲಾ ಶೇರುಗಳು ವಂತಿಗೆಯಾಗಿದ್ದು, 1,000 ಶೇರುಗಳಿಗೆ ಸಂಬಂಧಿಸಿದಂತೆ, ಪ್ರಥಮ ಮತ್ತು ಅಂತಿಮ ಕರೆಯ ಹಣದ ಹೊರತಾಗಿ, ಉಳಿದೆಲ್ಲಾ ಹಣ ಸ್ವೀಕರಿಸಲಾಗಿದೆ. ನಿರ್ದೇಶಕರು ಅವುಗಳನ್ನು ಮುಟ್ಟುಗೋಲು ಹಾಕಿಕೊಂಡು ಪ್ರತಿ ಶೇರಿಗೆ ₹ 80 ರಂತೆ ಪೂರ್ಣ ಪಾವತಿಗೆ ಮರು ಬಿಡುಗಡೆ ಮಾಡಿರುತ್ತಾರೆ.

ಶೇರುಗಳ ಬಿಡುಗಡೆ, ಮುಟ್ಟುಗೋಲು ಹಾಗೂ ಮರುಬಿಡುಗಡೆಗೆ ಸಂಬಂಧಿಸಿದಂತೆ ಅವಶ್ಯಕ ರೋಜು ದಾಖಲೆಗಳನ್ನು ಬರೆಯಿರಿ.

30] HCL ಕಂಪನಿ ನಿಯಮಿತ ಇವರ ಪುಸ್ತಕದಲ್ಲಿ ಕೆಳಗಿನ ಸಂದರ್ಭಗಳಲ್ಲಿ ಸಾಲಪತ್ರಗಳ ನೀಡಿಕೆಗೆ ಸಂಬಂಧಿಸಿದಂತೆ ರೋಜು ದಾಖಲೆಗಳನ್ನು ದಾಖಲಿಸಿ.

a] ತಲಾ ₹ 100 ರ ಮುಖಬೆಲೆಯ ಶೇಕಡಾ 8ರ ದರದ ₹ 50,000 ದ ಸಾಲಪತ್ರಗಳನ್ನು ಶೇಕಡಾ 10 ರ ಸೋಡಿಯಲ್ಲಿ ನೀಡಿಕೆ ಮಾಡಿ, ಮುಖಬೆಲೆಯಲ್ಲಿ ವಿಮೋಚನೆಗೊಳಿಸುವುದು.

b] ತಲಾ ₹ 100 ರ ಮುಖಬೆಲೆಯ ಶೇಕಡಾ 8ರ ದರದ ₹ 50,000 ದ ಸಾಲಪತ್ರಗಳನ್ನು ಶೇಕಡಾ 10 ರ ಪ್ರೀಮಿಯಂನಲ್ಲಿ ನೀಡಿಕೆ ಮಾಡಿ, ಮುಖಬೆಲೆಯಲ್ಲಿ ವಿಮೋಚನೆಗೊಳಿಸುವುದು.

c] ತಲಾ ₹ 100 ರ ಮುಖಬೆಲೆಯ ಶೇಕಡಾ 8ರ ದರದ ₹ 50,000 ದ ಸಾಲಪತ್ರಗಳನ್ನು ಶೇಕಡಾ 10 ರ ಪ್ರೀಮಿಯಂನಲ್ಲಿ ನೀಡಿಕೆ ಮಾಡಿ ಶೇಕಡ 10 ರ ಪ್ರೀಮಿಯಂನಲ್ಲಿ ವಿಮೋಚನೆಗೊಳಿಸುವುದು.

d] ತಲಾ ₹ 100ರ ಮುಖಬೆಲೆಯಲ್ಲಿ ಶೇಕಡಾ 8ರ ದರದ ₹ 50,000 ದ ಸಾಲಪತ್ರಗಳನ್ನು ಶೇಕಡ 10 ರ ಸೋಡಿಯಲ್ಲಿ ನೀಡಿಕೆ ಮಾಡಿ, ಶೇಕಡ 10ರ ಪ್ರೀಮಿಯಂನಲ್ಲಿ ವಿಮೋಚನೆಗೊಳಿಸುವುದು.


Visit CollegeDekho

31] ಯುನಿವರ್ಸಲ್ ಕಂಪನಿ ನಿಯಮಿತರವರ 31.03.2024 ಮತ್ತು 31.03.2025ರ ಅಢಾವೆ ಪತ್ರಿಕೆಗಳಿಂದ ತುಲನಾತ್ಮಕ ಅಢಾವೆ ಪತ್ರಿಕೆಯನ್ನು ತಯಾರಿಸಿ.

**ದಿನಾಂಕ : 31.03.2024 ಮತ್ತು ದಿನಾಂಕ : 31.03.2025 ರ ಅಢಾವೆ ಪತ್ರಿಕೆ**

| ವಿವರಗಳು | 31.03.2024 ₹ | 31.03.2025 ₹ |
|---|---|---|
| **I. ಈಕ್ವಿಟಿ ಮತ್ತು ಹೊಣೆಗಾರಿಕೆಗಳು :** | | |
| **1] ಶೇರುದಾರರ ನಿಧಿಗಳು** | | |
| ಶೇರುಬಂಡವಾಳ | 11,00,000 | 21,00,000 |
| ಮೀಸಲು ಮತ್ತು ಉಳಿಕೆ ಲಾಭ | 4,00,000 | 5,00,000 |
| **2] ಚಾಲ್ತಿಯೇತರ ಹೊಣೆಗಾರಿಕೆಗಳು** | | |
| ದೀರ್ಘಾವಧಿಯ ಸಾಲಗಳು | 2,00,000 | 5,00,000 |
| **3] ಚಾಲ್ತಿ ಹೊಣೆಗಾರಿಕೆಗಳು :** | | |
| ವ್ಯಾಪಾರಿ ಕೊಡತಕ್ಕವುಗಳು | 3,00,000 | 6,00,000 |
| ಒಟ್ಟು | 20,00,000 | 37,00,000 |
| **II. ಆಸ್ತಿಗಳು** | | |
| **1] ಚಾಲ್ತಿಯೇತರ ಆಸ್ತಿಗಳು** | | |
| ಗೋಚರ ಆಸ್ತಿಗಳು | 7,00,000 | 16,00,000 |
| ಅಗೋಚರ ಆಸ್ತಿಗಳು | 3,00,000 | 4,00,000 |
| ದೀರ್ಘಾವಧಿಯ ಹೂಡಿಕೆಗಳು | 4,00,000 | 5,00,000 |
| **2] ಚಾಲ್ತಿ ಆಸ್ತಿಗಳು** | | |
| ದಾಸ್ತಾನು | 4,50,000 | 6,50,000 |
| ವ್ಯಾಪಾರಿ ಬರತಕ್ಕವುಗಳು | 1,00,000 | 4,00,000 |
| ನಗದು ಮತ್ತು ನಗದು ಸಮಾನಕಗಳು | 50,000 | 1,50,000 |
| ಒಟ್ಟು | 20,00,000 | 37,00,000 |

32] ಈ ಕೆಳಗಿನ ಮಾಹಿತಿಗಳಿಂದ, ಕೆಳಗಿನ ಅನುಪಾತಗಳನ್ನು ಕಂಡು ಹಿಡಿಯಿರಿ:

a] ಚಾಲ್ತಿ ಅನುಪಾತ

b] ಬಡ್ಡಿ ಆವೃತ ಅನುಪಾತ

c] ಸ್ಥಿರ ಆಸ್ತಿಗಳ ಆವರ್ತನ ಅನುಪಾತ

d] ದುಡಿಯುವ ಬಂಡವಾಳದ ಆವರ್ತನ ಅನುಪಾತ

e] ಕಾರ್ಯಾಚರಣೆ ಲಾಭದ ಅನುಪಾತ ಮತ್ತು

f] ಹೂಡಿಕೆಯ ಮೇಲಿನ ಪ್ರತಿಫಲ.


Visit CollegeDekho

| ವಿವರಗಳು | ₹ |
|---|---|
| ಈಕ್ವಿಟಿ ಶೇರು ಬಂಡವಾಳ | **2,00,000** |
| ಪ್ರಾಶಸ್ತ್ಯ ಶೇರು ಬಂಡವಾಳ | **50,000** |
| ಮೀಸಲು ನಿಧಿ | **92,000** |
| 10% ಸಾಲಪತ್ರಗಳು | **2,00,000** |
| ಚಾಲ್ತಿ ಹೊಣೆಗಾರಿಕೆಗಳು | **50,000** |
| ಸ್ಥಿರಾಸ್ತಿಗಳು | **4,75,000** |
| ಚಾಲ್ತಿ ಆಸ್ತಿಗಳು | **1,17,000** |
| ತೆರಿಗೆ ನಂತರದ ನಿವ್ವಳ ಲಾಭ | **75,000** |
| ಕಾರ್ಯಾಚರಣೆಗಳಿಂದ ಬಂದ ಆದಾಯ | **15,00,000** |
| ತೆರಿಗೆ | **25,000** |
| ಕಾರ್ಯಾಚರಣೆ ಲಾಭ | **4,50,000** |

*****


Visit CollegeDekho

GOVERNMENT OF KARNATAKA

KARNATAKA SCHOOL EXAMINATION AND ASSESSMENT BOARD

6TH CROSS, MALLESHWARAM, BENGALURU – 560 003

# 2025 -26 II PUC MODEL QUESTION PAPER – 1

**SUBJECT: ACCOUNTANCY** **MAXIMUM MARKS : 80**

**TIME: 03 HOURS** **NUMBER OF QUESTIONS: 32**

**Instructions:**

1] The question paper contains four parts A, B, C and D. Part – A contains four sections I, II, III and IV.

2] Provide working notes wherever necessary.

3] 15 minutes extra has been allotted for candidates to read the questions.

4] Figures in the right hand margin indicate full marks.

5] For PART - A questions, only the first written answers will be considered for evaluation.

## PART – A

**I. Choose the correct answer from the choices given.** **(5 x 1 = 5)**

1] P and Q are partners sharing profits in the ratio of 3 : 1 'R' is admitted into partnership for 1/5th share. The sacrificing ratio of P and Q will be

a] 2:1 b] 3:1 c] 1:1 d] 3:2

2] On dissolution of the firm partners' capital accounts are closed through,

a] Realisation account b] Drawings account

c] Cash or Bank account d] Loan account

3] The profit on reissue of forfeited shares is transferred to

a] General reserve A/c b] Capital redemption reserve A/c

c] Capital reserve A/c d] Revenue reserve A/c

4] Which of the following is shown under the head "Fixed Assets"?

a] Inventories b] Trade receivables

c] Cash and Cash equivalents d] Goodwill

5] The following groups of ratios are primarily measures risk

a] Liquidity, debt and profitability b] Liquidity, activity and inventory

c] Liquidity, activity and debt d] Liquidity, activity and profitability

**II. Fill in the blanks by choosing the appropriate answers from those given in the bracket.** **(5 x 1 = 5)**

**[ new profit sharing, short term, stamp, artificial, realisation, long-term]**

6] The partnership deed should be properly drafted and prepared as per the provisions of the _______ act.

7] The __________ ratio is used for the adjustment of continuing partners' capitals.


Visit CollegeDekho

8] When realization expenses are paid by the firm on dissolution, such expenses are debited to _________ account.

9] A company is an __________ person.

10] Liquidity ratios are calculated to measure the _________ solvency of the business.

**III. Match the following.** **(5 x 1 = 5)**

**11]**

| A | B |
|---|---|
| a] Valuation of goodwill | (i) Acknowledgement of debt |
| b] Executor's Account | (ii) Financing activities |
| c] Debentures | (iii) Comparative statement |
| d] Horizontal analysis | (iv) Death of a partner |
| e] Issue of Shares | (v) Common size statement |
| | (vi) Average profit method |

**IV. Answer the following questions in one word or one sentence each.** **(5 x 1 = 5)**

12] State any one feature of partnership.

13] Expand DRFI.

14] Give an example for non-current asset.

15] State any one user of financial statement analysis.

16] Dividend paid is an investing activity (State True / False).

## PART – B

**V. Answer any three questions, each question carries two marks.** **(3 x 2 = 6)**

17] State any two differences between fixed capital method and fluctuating capital method.

18] Give the journal entry to close revaluation account when there is loss at the time of retirement of a partner.

19] Name any two categories of Share Capital.

20] Write any two objectives of financial statements.

21] What is cash flow statement?

## PART – C

**VI. Answer any three questions, each question carries six marks.** **(3 x 6 = 18)**

22] Bhavana and Kavana are partners in a firm sharing profits and losses in the ratio of 2:1. Kavana withdrew the following amounts during the year 2024-25 which are given as under.

a] ₹ 2,000 on 01.06.2024

b] ₹ 3,000 on 30.09.2024


Visit CollegeDekho

c] ₹ 1,000 on 30.11.2024

d] ₹ 1,500 on 01.01.2025

Calculate interest on Kavana's drawings at 10% p.a. for the year ending 31.03.2025 under product method.

23] Geetha, Latha and Sangeetha were partners sharing profits and losses in the ratio of 5:3:2 respectively. Latha retires from the business. Geetha and Sangeetha decided to share future profits in the ratio of 3:2. Calculate gaining ratio of Geetha and Sangeetha.

24] X, Y and Z were partners sharing profits and losses in the ratio of 2:2:1 respectively. Their capital balances as on 01.04.2024 stood at ₹ 1,00,000, ₹ 1,00,000 and ₹ 50,000 respectively.

Y died on 31.12.2024 the partnership deed provides the following.

a] Interest on capital at 10% p.a.

b] Salary to Y ₹ 3,000 per month

c] Y's share of goodwill. Goodwill of the firm is valued at ₹ 45,000 (As per AS-26)

d] Y's share of profit up to the date of death on the basis of previous year's profit. Profit for the previous year was ₹ 60,000.

**Prepare Y's capital account.**

25] From the following information, prepare statement of profit or loss for the year ended 31.03.2025 as per schedule III of the Companies Act, 2013.

| Particulars | ₹ |
|---|---|
| Revenue from operations | **8,00,000** |
| Purchases of goods | **2,00,000** |
| Salaries to employees | **1,00,000** |
| Bonus | **20,000** |
| Depreciation | **50,000** |
| Interest on debentures | **25,000** |
| Interest on borrowings | **20,000** |
| Tax | **1,15,500** |

26] From the following information, calculate cash flows from financing activities.

| Particulars | 01.04.2024 ₹ | 31.03.2025 ₹ |
|---|---|---|
| Equity Share Capital | **10,00,000** | **15,00,000** |
| Long-term Loan | **4,50,000** | **8,00,000** |

During the year long-term loan repaid ₹ 2,00,000 with interest of ₹ 10,000 and paid dividend of ₹ 25,000.


Visit CollegeDekho

## PART – D

**VII. Answer any three questions, each question carries twelve marks. (3 x 12 = 36)**

27] Girisha and Yogisha are partners sharing profits and losses in the ratio of 3:2 respectively. Their balance sheet as on 31.03.2025 was as follows :

**Balance Sheet as on 31.03.2025**

| Liabilities | ₹ | Assets | ₹ |
|---|---|---|---|
| Creditors | **74,000** | Cash | **31,000** |
| Bills payables | **41,000** | Debtors 1,00,000 | |
| General Reserve | **50,000** | Less : PDD 6,000 | **94,000** |
| Capital Accounts : | | Stock | **30,000** |
| Girisha | **1,40,000** | Furniture | **20,000** |
| Yogisha | **80,000** | Machinery | **40,000** |
| | | Buildings | **1,60,000** |
| | | Profit and Loss A/c. | **10,000** |
| | **3,85,000** | | **3,85,000** |

On 01.04.2025, they admit 'Kallesha' into Partnership on the following terms :

a] Kallesha should bring in ₹ 60,000 as capital for 1/6th share and ₹ 25,000 towards goodwill [As per AS-26]

b] Goodwill amount is withdrawn by the old partners.

c] Depreciate Furniture and Machinery by 10% each.

d] Value of buildings is appreciated by 15%.

e] Maintain PDD at 10% on Debtors.

**Prepare :** i] Revaluation Account

ii] Partners Capital Accounts and

iii] New Balance Sheet of the firm as on 01.04.2025

28] Shankara and Sadananda are partners sharing profits and losses in the ratio of 3:2. Their balance sheet as on 31.03.2025 was as follows:

**Balance sheet as on 31.03.2025**

| Liabilities | ₹ | Assets | ₹ |
|---|---|---|---|
| Creditors | **35,000** | Cash at Bank | **30,000** |
| Bills Payables | **15,000** | Bills Receivable | **10,000** |
| Bank Loan | **25,000** | Debtors | **60,000** |
| Shankara's Loan | **10,000** | Investments | **40,000** |
| Reserve Fund | **30,000** | Furniture | **5,000** |
| **Capitals:** | | Machinery | **70,000** |
| Shankara | **1,00,000** | Building | **80,000** |
| Sadananda | **80,000** | | |
| | **2,95,000** | | **2,95,000** |


Visit CollegeDekho

On the above date the firm was dissolved.

**Additional Information :**

a] The assets were realized as follows :

Bills receivable ₹ 8,000

Debtors ₹ 55,000

Investments ₹ 50,000

Furniture ₹ 4,000

Machinery ₹ 65,000

b] Building was taken over by Shankara at ₹ 90,000.

c] Creditors and Bills payable were settled at 10% discount.

d] Realisation expenses were ₹ 3,000.

**Prepare :**

i] Realisation Account

ii] Partners' Capital Accounts and

iii] Bank Account.

29] Ramakrishna Company Limited issued 20,000 equity shares of ₹ 100 each at a premium of ₹ 10 per share. The amount was payable as follows:

On application ₹ 20

On allotment ₹ 55 (including premium)

On first and final call ₹ 35

All the shares were subscribed and money duly received except the first and final call on 1,000 shares. The directors forfeited these shares and reissued them as fully paid at ₹ 80 per share. Pass the necessary journal entries regarding issue, forfeiture and reissue of share.

30] Give the Journal entries for issue of debentures for the following cases in the books of HCL Company Ltd.,

a] Issue of ₹ 50,000, 8% debentures of ₹ 100 each at a discount of 10% and redeemable at par.

b] Issue of ₹ 50,000, 8% debentures of ₹ 100 each at a premium of 10% and redeemable at par.

c] Issue of ₹ 50,000, 8% debentures of ₹ 100 each at a premium of 10% and redeemable at a premium of 10%.

d] Issue of ₹ 50,000, 8% debenture of ₹ 100 each at a discount of 10% and redeemable at a premium of 10%.

31] From the following Balance Sheet of Universal Company Ltd., prepare comparative balance sheet as on 31.03.2024 and 31.03.2025.


Visit CollegeDekho

**Balance Sheet as on 31.03.2024 and 31.03.2025**

| Particulars | 31.03.2024 ₹ | 31.03.2025 ₹ |
|---|---|---|
| **I. Equity and Liabilities :** | | |
| **1] Shareholders Funds** | | |
| Share Capital | **11,00,000** | **21,00,000** |
| Reserves and Surplus | **4,00,000** | **5,00,000** |
| **2] Non-Current Liabilities** | | |
| Long-term loans | **2,00,000** | **5,00,000** |
| **3] Current Liabilities** | | |
| Trade payables | **3,00,000** | **6,00,000** |
| **Total** | **20,00,000** | **37,00,000** |
| **II. Assets :** | | |
| **1] Non-Current Assets** | | |
| Tangible Assets | **7,00,000** | **16,00,000** |
| Intangible Assets | **3,00,000** | **4,00,000** |
| Long-term Investments | **4,00,000** | **5,00,000** |
| **2] Current Assets** | | |
| Inventories | **4,50,000** | **6,50,000** |
| Trade receivables | **1,00,000** | **4,00,000** |
| Cash and Cash equivalents | **50,000** | **1,50,000** |
| **Total** | **20,00,000** | **37,00,000** |

32] From the following particulars, Calculate:

a] Current ratio

b] Interest coverage ratio

c] Fixed assets turnover ratio

d] Working capital turnover ratio

e] Operating profit ratio and

f] Return on investment

| Particulars | ₹ |
|---|---|
| Equity share capital | 2,00,000 |
| Preference share capital | 50,000 |
| Reserve fund | 92,000 |
| 10% debentures | 2,00,000 |
| Current liabilities | 50,000 |
| Fixed Assets | 4,75,000 |
| Current Assets | 1,17,000 |
| Net profit after tax | 75,000 |
| Revenue from operations | 15,00,000 |
| Tax | 25,000 |
| Operating profit | 4,50,000 |

*****


Visit CollegeDekho